ಆ) ಕಂಸಿದು ಬಿದ್ದು ಎಷ್ಟು ದಿವಸವಾಯಿತಂ ?

ಇ) ಅದರ ಬಗೆಗೆ ಸರ್ಕಾರದವರಂ ತೆಗೆದುಕೊಂಡ ಕ್ರಮಗಳೇನು ?

ಈ) ಈ ಕಟ್ಟಡವನ್ನು ಕೆಡವಿ ಹೊಸ ಕಟ್ಟಡವನ್ನು ಯಾವಾಗ ನಿರ್ಮಿಸಲಾಗುವುದು ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು).—

ಆ) ನಿಜ

ಆ) ಸುಮಾರು ೬ ವರ್ಷಗಳಾದವು

ಇ) ಕುಸಿದಿರುವ ಹಳೆಯ ಕಟ್ಟಡದ ದುರಸ್ತಿಗಾಗಿ ಲೋಕೋಪಯೋಗಿ ಇಲಾಖೆಯಿಂದ ನಕ್ಷೆ ಮಂತ್ತು ಅಂದಾಜು ಪಟ್ಟಿಗಳನ್ನು ಕೋರಲಾಗಿದೆ.

ಸುರಕ್ಷತೆಯ ದೃಷ್ಟಿಯಿಂದ ಪ್ರಾಥಮಿಕ ಆರೋಗ್ಯ ಘಟಕವನ್ನು ಎ.ಎನ್.ಎಂ. ಉಪಕೇಂದ್ರ ಕಟ್ಟಡಕ್ಕೆ ಸ್ಥಳಾಂತರಿಸಿ ಈಗ ಅದು ಅಲ್ಲಿ ಕಾರ್ಯ ನಿರ್ವಹಿಸಲಾಗುತ್ತಿದೆ.

ಈ) ಲೋಕೋಪಯೋಗಿ ಇಲಾಖೆಯಿಂದ ನಕ್ಷೆ ಮತ್ತು ಅಂದಾಜು ಪಟ್ಟಿಗಳು ಬಂದ ನಂತರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾರು ಪ್ರಶ್ನೆ ಕೇಳಿದ್ದಾರೆಂಬುದನ್ನು ನೋಡಿಕೊಂಡ, ಉತ್ತರ ಕೊಡುವುದಂ ಬೇಡವೆ ?

ಅಧ್ಯಕ್ಷರು.—ಇರಲಿ, ಇರಲಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸಮಾಧಾನ ತಂದುಕೊಳ್ಳಿ, ಸ್ವಲ್ಪ ಗೊಂದಲವಾಗಿದೆ ಸರಿಪಡಿಸುತ್ತೇನೆ.

ಶ್ರೀ ಕೆ.ಎಚ್. ಪಾಟೀಲ್.—ಸ್ವಾಮಿ ಆರು ವರ್ಷಗಳಾದರೂ ಕೂಡ ಸರ್ಕಾರಕ್ಕೆ ಎಸ್ಟಿಮೇಟ್ ಮತ್ತು ಪ್ಲಾನ್ ಬಂದಿಲ್ಲ ಅಂದರೆ ಇದಂ ದುರ್ದೈವದ ಸಂಗತಿ ಎಂದು ಹೇಳಬೇಕಾಗುತ್ತದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಜನ ಹೊರಗಡೆ ಬಂದಂ ಕುಳಿತಿರುತ್ತಾರೆ. ಅಲ್ಲಿ ದುರ್ಬರ ಪರಿಸ್ಥಿತಿ ಇದೆ ಎನ್ನುವುದು ಸರ್ಕಾರದವರಿಗೆ ಗೊತ್ತಿದೆಯೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ದುರ್ಬರ ಪರಿಸ್ಥಿತಿ ಇದೆ ಎನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ನಕಾಶೆ ಮತ್ತು ಅಂದಾಜುಗಳು ಲೋಕೋಪಯೋಗಿ ಇಲಾಖೆಗೆ ಬರಲೇ ಬೇಕು ಅನಂತರ ಕಟ್ಟಡಗಳ ಕೆಲಸವನ್ನು ವಿಧಿವತ್ತಾಗಿ ಪ್ರಾರಂಭ ಮಾಡಬೇಕು, ಆದಷ್ಟು ಬೇಗನೆ ಕಳುಹಿಸಿಕೊಡುವಂತೆ ನಮ್ಮ ಇಲಾಖಾ ವತಿಯಿಂದ ಪತ್ರಗಳನ್ನು ಬರೆಯಲಾಗಿದೆ.

ಚಿಕ್ಕಬಳ್ಳಾಪುರದಲ್ಲಿ ಕ್ರೀಡಾಂಗಣದ ನಿರ್ಮಾಣ

೮೯೩. ಶ್ರೀ ಕೆ. ಎಂ. ಮುನಿಯಪ್ಪ (ಚಿಕ್ಕಬಳ್ಳಾಪುರ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಬಳ್ಳಾಪುರದಲ್ಲಿ ಕ್ರೀಡಾಂಗಣ ಸ್ಥಾಪನೆ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು, ಹಾಗೂ ಇದಕ್ಕೆ ಸರ್ಕಾರದವರು ಮಂಜೂರ್ಮಾಡಿರುವ ಹಣವೆಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ಸರ್ಕಾರ ಈಗಾಗಲೇ ನಕಾಶೆ ಹಾಗೂ ೮.೭೩ ಲಕ್ಷರೂ.ಗಳ ಅಂದಾಜುವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆಯನ್ನು ೧೯೮೧ರಲ್ಲಿ ಕೊಟ್ಟಿದೆ ಇದುವರೆಗೂ ಸರ್ಕಾರದಿಂದ ಯಾವುದೇ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ.

ಶ್ರೀ ಕೆ.ಎಂ. ಮುನಿಯಪ್ಪ.—ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಉಪ ವಿಭಾಗ ಕೇಂದ್ರ. ಈ ತಾಲ್ಲೂಕು ಕ್ರೀಡೆಗಳಲ್ಲಿ ರಾಷ್ಟ್ರವನ್ನ ಮತ್ತು ರಾಜ್ಯವನ್ನ ಪ್ರತಿನಿಧಿಸತಕ್ಕ ಲಕ್ಷ್ಮೀನಾರಾಯಣಪ್ಪ ನವರು ಮತ್ತಿತರು ಹುಟ್ಟಿದಂಥ ಜಾಗ, ಇಂಥ ಒಂದು ತಾಲ್ಲೂಕಿನಲ್ಲಿ ಒಂದು ಕ್ರೀಡಾಂಗಣ ಬೇಕೆಂದು

ಕಳೆದ ೧೬ ವರ್ಷಗಳಿಂದಲೂ ಬೇಡಿಕೆಯನ್ನು ಸರ್ಕಾರದ ಮುಂದಿಟ್ಟಿದ್ದಾರೆ. ಈ ವರ್ಷದಲ್ಲಾದರೂ ಕ್ರೀಡಾಂಗಣವನ್ನು ಕಟ್ಟಿಸಿಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಹಣವನ್ನು ಬರುವ ಆರ್ಥಿಕ ವರ್ಷದಲ್ಲಿ ಬಿಡುಗಡೆ ಮಾಡಿ, ಕೆಲಸವನ್ನು ಪ್ರಾರಂಭ ಮಾಡಲಾಗುವುದು.

ಕೊಲ್ಲೂರಿನಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ನಿರ್ಮಾಣ

೧೧೨೧. ಶ್ರೀ ಬಿ.ಎಸ್. ಆಚಾರ್ (ಬೈಂದೂರು).—ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧ ಕೊಲ್ಲೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಟ್ಟಡ ನಿರ್ಮಾಣ ಅತಿ ಅವಶ್ಯಕವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

೨ ಈ ಸಲುವಾಗಿ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ಆರೋಗ್ಯ ಮಂತ್ರಿಗಳು ಕೊಲ್ಲೂರಿಗೆ ಬಂದಿದ್ದಾಗ ಆಶ್ವಾಸನೆ ನೀಡಿದ್ದು ನಿಜವಲ್ಲವೆ ?

೩ ಹಾಗಿದ್ದಲ್ಲಿ ೧೯೮೬-೮೭ನೇ ವರ್ಷದ ನಯವ್ಯಯದಲ್ಲಿ ಈ ಸಲುವಾಗಿ ಹಣ ಒದಗಿಸಿದ್ದರೂ ಹಾಗೂ ಮೂರು ಲಕ್ಷವನ್ನು ಕೊಲ್ಲೂರು ದೇವಸ್ಥಾನದವರೇ ಪಾವತಿ ಮಾಡಿದ್ದರೂ ಸರ್ಕಾರಿ ಆದೇಶ ಸಂಖ್ಯೆ ಆಕುಇ ೮೦ ಸಿಜಿಎಸ್ ೮೬ ದಿನಾಂಕ ೧೪-೧೦-೮೬ರ ಮೇರೆಗೆ ರದ್ದು ಗೊಳಿಸಲು ಕಾರಣವೇನು ?

೪ ಕಟ್ಟಡ ನಿರ್ಮಾಣದ ಬಗೆಗೆ ಸರ್ಕಾರದವರು ಯಾವ ಕ್ರಮ ಕೈಗೊಳ್ಳುವರು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು).—

೧ ಬಂದಿದೆ

೨ ನಿಜ

೩ ಈ ಕಾಮಗಾರಿಯ ಅಂದಾಜು ವೆಚ್ಚದ 1/3 ಭಾಗದಷ್ಟು ಹಣ ಇರಲಿಲ್ಲವಾದ್ದರಿಂದ ಅದನ್ನು ಈ ವರ್ಷ ತೆಗೆದ ಕೊಳ್ಳಲು ಸಾಧ್ಯವಾಗಲಿಲ್ಲ. ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದವರು ಪ್ರಸೂತಿ ಗೃಹ ಮಂಜೂರಾತಿಗಾಗಿ ೨.೦೦ ಲಕ್ಷ ರೂಪಾಯಿಗಳನ್ನು ದೇಣಿಗೆ ಕೊಟ್ಟಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡಕ್ಕಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ನಿರ್ಮಾಣ ವೆಚ್ಚವನ್ನು ಸರ್ಕಾರವೇ ಭರಿಸುವುದು.

೪ ೧೯೮೭-೮೮ನೇ ಸಾಲಿನಲ್ಲಿ ಹಣದ ಲಭ್ಯತೆಯನ್ನು ಗಮನಿಸಿ ಪರಿಶೀಲಿಸಲಾಗುವುದು.

ಶ್ರೀ ಜಿ. ಎಸ್. ಆಚಾರ್.— ಮಾನ್ಯ ಅಧ್ಯಕ್ಷರೆ, ಕೊಲ್ಲೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕಟ್ಟಡದ ಅವಶ್ಯಕತೆ ಇದೆ ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು, ಸಾರ್ವಜನಿಕ ಕಾಮಗಾರಿ ಸಚಿವರೂ ಹಾಗೂ ಈ ಹಿಂದಿನ ಆರೋಗ್ಯ ಸಚಿವರು ವಾಗ್ದಾನ ಕೊಟ್ಟಿದ್ದು ನಿಜ ಎಂಬುದನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಹಾಗಿದ್ದರೆ ಕೊಟ್ಟಂತ ವಾಗ್ದಾನವನ್ನು ಈಡೇರಿಸಬೇಕಾದದ್ದು ನಿಜವಲ್ಲವೇ? ವಾಗ್ದಾನ ಕೊಟ್ಟ ಮೇಲೆ, ಕೊಲ್ಲೂರು ಅಲ್ಲದೆ, ಇನ್ನೂ ೩-೪ ಆಸ್ಪತ್ರೆಗಳಿಗೆ ಬೇಕಾದಷ್ಟು ಹಣವನ್ನು ಒದಗಿಸಲಾಗಿದ್ದು, ಅದನ್ನು ೧೪-೧೦-೮೬ರಲ್ಲಿ ಬದಲಾಯಿಸಿರುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲವೇ? ಕೊಲ್ಲೂರು ಆಸ್ಪತ್ರೆಗೆ ಮೂರನೇ ಒಂದಂಶದಷ್ಟು ಹಣ ಲಭ್ಯವಾಗಿರಲಿಲ್ಲವೇ?

MR. SPEAKER.— The work will be taken up during 1987-88 depending upon the availability of the funds ಎಂದು ಹೇಳಿದ್ದಾರೆ. ಆದ್ದರಿಂದ ಯಾವಾಗ ಫಂಡ್ಸ್ ಅವೈಲಬಿಲಿಟಿ ಮಾಡುತ್ತೀರಿ ಎಂದು ಕೇಳಿ.

SRI G.S. ACHAR.— Depends upon the availability of the funds ಪ್ರಶ್ನೆ ಅಲ್ಲಿ last year fundswere provided and it was diverted ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಬಂದ ಸಂದರ್ಭದಲ್ಲಿ ವಾಗ್ದಾನ ಕೊಟ್ಟಿದ್ದಾರೆ. ಆದ್ದರಿಂದ, ಈ ರೀತಿ ಆಗಬಾರದೆಂದು ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ.